**ಒ.ಎಸ್.ನಂ. 417/22**

**ಡಿ. ಡಬ್ಲೂ-1**

**ದಿನಾಂಕಃ 24.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ವಾದಿ ಪರ ವಕೀಲರಿಂದಃ-**

ವಾದಿಗಳ ದಾವಾ ಸ್ವತ್ತಿಗೆ ನಾವು ತೊಂದರೆ ಕೊಡುತ್ತಿದ್ದೇವೆ ಎಂದು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ 45/4 ರಲ್ಲಿ ಒಟ್ಟು 7 ಎಕರೆ ಚಿಲ್ಲರೆ ಇತ್ತು. ಸದರಿ 7 ಎಕರೆ ಜಮೀನನ್ನು ನಾವು ಮತ್ತು ವಾದಿಗಳು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸರ್ವೇ ನಂ 45 ರಲ್ಲಿ ಒಟ್ಟು 3 ಎಕರೆ 32 ಗುಂಟೆ ಇದ್ದು, 2005-2006 ನೇ ಸಾಲಿನಲ್ಲಿ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ವಾದಿಗಳು ಖಾತೆ ಮಾಡಿಸಿಕೊಂಡಿರುವುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ 1.0.2 0.8 ನನ್ನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ನನ್ನ ಅಣ್ಣ ಸಿಗಪ್ಪ ರವರ ಹೆಸರಿಗೆ 36.08 ಗುಂಟೆ ಖಾತೆ ಆಗಿರುತ್ತದೆ ಎಂದರೆ ಸರಿ. 1 ನೇ ವಾದಿ ಹೆಸರಿಗೆ 36.08 ಮತ್ತು 2 ನೇ ವಾದಿಗೆ 36.08 ಖಾತೆ ಆಗಿರುತ್ತದೆ ಎಂದರೆ ಸರಿ. ಭಾಗ ಆದ ನಂತರ ನಮ್ಮ ನಮ್ಮ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. 2 ನೇ ವಾದಿ ಹೆಸರಿಗೆ ಖಾತೆ ಆದ ನಂತರ ಅವರ ಭಾಗಕ್ಕೆ ಬಂದಿದ್ದ 36.08 ಗುಂಟೆ ಜಮೀನನ್ನು 1 ನೇ ವಾದಿ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2005-2006 ನೇ ಸಾಲಿನಿಂದ ಇಲ್ಲಿಯವರೆಗೂ 1 ಎಕರೆ 33 ಗುಂಟೆ ಜಮೀನು 1 ನೇ ವಾದಿ ಹೆಸರಿಗೆ ಬರುತ್ತಿದೆ ಎಂದರೆ ಸರಿಯಲ್ಲ. ವಾದಿ ಹಾಜರುಪಡಿಸಿದ ದಾಖಲೆಗಳನ್ನು ಓದಿ ತಿಳಿದುಕೊಂಡಿರುತ್ತೇನೆ. 1 ನೇ ವಾದಿ ಹೆಸರಿನಲ್ಲಿ ನಮೂದು ಆಗಿರುವ ಖಾತೆಯನ್ನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ವಿಭಾಗವಾದ ನಂತರ ಪ್ರತ್ಯೇಕ ಖಾತೆ ಮಾಡಿಸಿಕೊಂಡು ಪ್ರತ್ಯೇಕ ಸ್ವಾಧೀನ ಇದ್ದೇವೆ ಎಂದರೆ 1 ನೇ ವಾದಿಯ ಜಮೀನನ್ನು ಗುತ್ತಿಗೆಗೆ ಪಡೆದುಕೊಂಡು 15 ವರ್ಷದಿಂದ ನಾನೇ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. 15 ವರ್ಷದಿಂದ ವಾದಿ ಜಮೀನನ್ನು ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ಪಾಲುಪಾರಿಕತ್ತು ಮಾಡಿಕೊಂಡಿರುತ್ತೇವೆ ಎಂದು ಹೇಳಿದ್ದು ಆ ರೀತಿ ಮಾಡಿಕೊಂಡ ಬಗ್ಗೆ ದಾಖಲೆ

ಹಾಜರುಪಡಿಸಿರುತ್ತೇನೆ. 2 ನೇ ವಾದಿ ಜಮೀನನ್ನು ನಾನೇ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. 1 ನೇ ವಾದಿಯ ಮಕ್ಕಳ ವಿದ್ಯಾಭ್ಯಾಸಕ್ಕೆ 1 ಲಕ್ಷ 40 ಸಾವಿರ ಹಣ ಕೊಟ್ಟಿರುತ್ತೇನೆ ಎಂದು ಹೇಳಿದ್ದು ದಾಖಲೆ ಇದೆಯಾ ಎಂದರೆ ಇದೆ ಎಂದು ನುಡಿಯುತ್ತಾರೆ. ಆ ರೀತಿ 1 ನೇ ವಾದಿ 1 ಲಕ್ಷ 40 ಸಾವಿರ ಹಣ ಪಡೆದು ನನಗೆ ಯಾವುದೇ ದಾಖಲೆ ಬರೆದು ಕೊಟ್ಟಿಲ್ಲ ಮತ್ತು ಅವರ ಜಮೀನನ್ನು ಗುತ್ತಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಸೇರಿದ ಜಮೀನು ರಸ್ತೆ ಕಡೆಗೆ ಬರುತ್ತದೆ ಎಂದರೆ ಸರಿ. ನನ್ನ ಜಮೀನಿನ ಪೂರ್ವ ದಿಕ್ಕಿಗೆ 1 ನೇ ವಾದಿ ಜಮೀನು ಬರುತ್ತದೆ, ಅದಾದ ನಂತರ 2 ನೇ ವಾದಿ ಜಮೀನು ಬರುತ್ತದೆ. ವಾದಿಗಳ ಜಮೀನಿನ ಪೂರ್ವ ದಿಕ್ಕಿಗೆ ಪ್ರೇಮ ಮತ್ತು ಸುಬ್ಬರಾಯ ರವರ ಜಮೀನು, ಪಶ್ಚಿಮಕ್ಕೆ ನನ್ನದೇ ಜಮೀನು, ಉತ್ತರಕ್ಕೆ ಸುಬ್ಬರಾಯ ಮತ್ತು ಓಣಿ, ದಕ್ಷಿಣಕ್ಕೆ ರಘು ರವರ ಜಮೀನು ಎಂದರೆ ಸರಿ. ಸದರಿ ಜಮೀನಿಗೆ ನನ್ನ ಜಮೀನಿನ ಮೇಲಭಾಗದ ಕಡೆಗೆ ಹೋಗಬೇಕಾಗುತ್ತದೆ ಎಂದರೆ ಸರಿ. ದಿಃ11.10.2022 ರಂದು ವಾದಿಗಳು ತಮ್ಮ ಜಮೀನಿಗೆ ಹೋಗಲು ಅಡ್ಡಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಅಡ್ಡಿಪಡಿಸಿದಾಗ ಪೊಲೀಸ ದೂರು ಕೊಟ್ಟಿದ್ದರು ಎಂದರೆ ಸರಿ. 1 ನೇ ವಾದಿ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ವಾಸ ಇರುತ್ತಾರೆ ಎಂದರೆ ಸರಿ. ಅವರು ಬೆಂಗಳೂರಿನಲ್ಲಿ ಇರುವ ಕಾರಣ ಮತ್ತು ಸಿಂಗಪ್ಪ ರವರ ಜಮೀನು ವ್ಯವಸಾಯ ಮಾಡುತ್ತಿರುವುದ್ದರಿಂದ ಅವರ ಜಮೀನಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗದ ನಂತರ ಅವರವರ ಜಮೀನಿನಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಮನೆ ಕಟ್ಟಿಕೊಳ್ಳುವ ಉದ್ದೇಶದಿಂದ ನನಗೆ 6 ಗುಂಟೆ ಹೆಚ್ಚುವರಿಯಾಗಿ ಬಿಟ್ಟಿರುತ್ತಾರೆ ಎಂದರೆ ಸರಿ. 2 ನೇ ವಾದಿ ಮತ್ತು ನನ್ನ ತಂಗಿ ರೇಖಾಮಣಿ ಅದೇ ಊರಿನಲ್ಲಿ ಒಂದೇ ಮನೆಯಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ರೇಖಾಮಣಿ ಗೆ ಮದುವೆ ಆಗಿರುತ್ತದೆ ಎಂದರೆ ಸರಿ. ನಾನು ನನ್ನ ತಾಯಿ ಮತ್ತು ತಂಗಿಯನ್ನು ಯಾವತ್ತು ನೋಡಿಕೊಂಡಿಲ್ಲ ಅವರು ಪ್ರತ್ಯೇಕ ವಾಸ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಂಗಿಗೆ ಮದುವೆ ಮಾಡಿರುತ್ತೇನೆ ಮತ್ತು ನನ್ನ ತಾಯಿಯನ್ನು ನೋಡಿಕೊಂಡಿರುತ್ತೇನೆ ಎಂದು ದಾವಾ ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ..ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**